158

Fonuded 1917 SATYAVADI Regd No·M 1299

ಸತ್ಯವಾದಿ

ಸಂಪುಟ ೨೫ ಸಂಚಿಕೆ ೩೭] ಬುಧವಾರ 20 - 5—1942 [ಎ. ಸೆಕ್ಷ್ಕ್ ೪ ಪುಟ ೩ ಪೈ
ಎ. ಬಿ ಸೆಕ್ಷ್ಕ್ ಒಟ್ಟು 8 ಪುಟ ಬಿ ಸೆಕ್ಷ್ಕ್ (3 ಪೈ) ತಪ್ಪದೆ ಓದಿ

ಶ್ರೀ ವಿದ್ಯಾರಣ್ಯ ಪಜಿಲ್ ನಂ. 13, ಬಳ್ಳಾರಿ.

ಪ್ರಥಮ ಬಹುಮಾನ
ಸರಿಯಾದ ಉತ್ತರಕ್ಕೆ ರೂ. ೩೦೦
೧ ತಪ್ಪಿದ್ದವರಿಗೆ ರೂ. ೧೦೦
೨, ೩ ತಪ್ಪಿದ್ದವರಿಗೆ ರೂ. ೧೦೦
ಹೆಚ್ಚಿಗೆ ಕೂರ್ಪ ಕಳುಹಿಸಿದವರಿಗೆ ರೂ. ೫೧
ಇದಲ್ಲದೆ ಪ್ರೋತ್ಸಾಹನೆ ಬಹುಮಾನಗಳು

ರೂ ಪಾ ಯಿ
600
ಬ ಹು ಮಾ ನ

ಉತ್ತರವನ್ನು ಪ್ರಕಟಿಸುವ ದಿನ
ತಾ|| 14—6—42 ಪ್ರಜಾವಾಣಿ-ತಪಲ್ಲಿ
ತಾ|| 8—6—42 ತಾಯಿನಾಡು
9 ಪೈ ಸ್ಟಾಂಪು ಹೆಚ್ಚಿಗೆ ಕಳುಹಿಸಿದವರಿಗೆ ಪ್ರೈಜ್‌ಲಿಸ್ಟ್‌ನ್ನು ಮುಂದಿನ ಪಜಲಿನ ಬಿಡಿಕೂಪನ್ನುಗಳೊಡನೆ ಕಳುಹಿಸುವ ದಿನ 14—6—42.

4 ಕ್ಕಿಂತಲೂ ಕಡಿಮೆ ಕೂಪನ್ನುಗಳನ್ನು ಸ್ವೀಕರಿಸುವದಿಲ್ಲ.

ನಿಮ್ಮ ಗ್ರಾಮದಲ್ಲಿ ಪೋಸ್ಟು ಮಾಡಬಹುದಾದ ಕೊನೆಯ ದಿನ 4—6—42. ಆದರೂ ಸಮಯಕ್ಕೆ ತಲಪದವುಗಳನ್ನು ನಿರಾಕರಿಸಲಾಗುತ್ತೆ.

ಪ್ರವೇಶದ ರೂಪು
4 ಕೂಪನ್ನುಗಳಿಗೆ ರೂ. 1—0—0
1 ಕೂಪನ್ನಿಗೆ ರೂ. 0—4—0



ಆ ಧಾ ರ ಗ ಳು

ಎಡದಿಂದ ಬಲಕ್ಕೆ— 1 ಶ್ರೀ ವಿದ್ಯಾರಣ್ಯರ ಜರೂದು. 4 ಆಹಾ ! "—" ಯರ ಪ್ರೇಮಕ್ಕೆ ಪಾತ್ರನಾದವನಿಗೆ ಇಹಲೋಕ ಸೌಖ್ಯವು ಕೊರತೆಯೇ ? 8 ಸಂಸಾರದ ನಾಯಿಕೀನುಣಿ. 11 ತಪ್ಪಿದ ಅಕ್ಷರವನ್ನು ತೋರ್ಪಡಿಸುವ ಗುರ್ತು. 12 " ರಷ್ಯಾ " (ಹಿಂದುಮುಂದಾಗಿದೆ) 13 ಹತ್ತು. 15 ಪರರ ವಸ್ತುಗಳೆಂದು ' — " ಸಜಾರದು. 16 ಹೆಚ್ಚಾದ " ಇದರಿಂದ " ಮಾನವನು ಚೈತನ್ಯಶೂನ್ಯನಾಗಬಹುದು. 17 ಧರ್ಮ ತಪ್ಪಿದ 19 " — " ಯುಳ್ಳ ಪೋಟೋದಾರನು ಪ್ರಥಮ ಬಹುಮಾನವನ್ನು ಪಡೆಯಬಹುದೇ ? 22 ಜೀವ. 23 ಹಟಮಾರಿ ಹುಡುಗರು ತಂದೆತಾಯಿಯರನ್ನು ಹಗಲಿರಳೂ " — " ನೋಡಿದ ವಿಷಯವೇ.

ಮೇಲಿಂದ ಕೆಳಕ್ಕೆ—1 ಆಂಜನೇಯ. 2 ಅರಮನೆ. 3 ಪರಮೇಶ್ವರನಿಗೆ ಈ ಹೆಸರುಂಟು. 4 ಇವರಲ್ಲಿ ಬಹು ಜಾಗರೂಕತೆ ಇರಬೇಕು. 5 " ಗಾದೆ " (ಹಿಂದುಮುಂದಾಗಿದೆ) 6 " ಸಂದಣಿ " (ಕಲಶಿಹೋಗಿದೆ) 7 ಧ್ವನಿ (ಶಬ್ದ) 9 ಭಾರತ ದೇಶಕ್ಕೆ ಮುತ್ತೊಂದು ಹೆಸರು. 10 " — " ವಾಗಿರುವ ಪ್ರದೇಶದಲ್ಲಿ ಯುದ್ಧದ ಭಯವು ಕಡಿಮೆಯೆಂದೇ ಹೇಳಬಹುದು. 14 ಕಳ್ಳರಿಗೆ ಇದು ಸಹಾಯಕಾರಿ. 15 ಇದರಿಂದಲೇ ಜೀವನ ಮಾಡುವವರು ಕೆಲವರಿದ್ದಾರೆ. 18 ಸ್ಥಿತ (ತದ್ಭವ) 20 " ದುರಾತ್ಮ " (ಕಲಶಿಹೋಗಿದೆ) 21 ಮೋಟಾರುಗಳ ಕೊರತೆಯಿಂದಾ ಮೂಲೆಗೆ ಹಾಕಿದ್ದ ಇವುಗಳ ಉಪಯೋಗವು ಹೆಚ್ಚಾಯಿತು.

ಸೂಚನೆ— ಎಲ್ಲರೂ ನಮ್ಮ ಸಂಸ್ಥೆಯ ನಿಬಂಧನೆಗಳಿಗೆ ಒಳಪಟ್ಟಿರಬೇಕು. ಈ ಪಜಿಲಿನ ಎಲ್ಲಾ ವಿಷಯದಲ್ಲೂ ಮ್ಯಾನೇಜರ್ ಮಾಡುವ ನಿರ್ಣಯವೇ ಕೊನೆಯದು. ವಾದವಿವಾದಕ್ಕೆ ಆಸ್ಪದವಿಲ್ಲ. ರೂಪು ಮತ್ತು ಕೂಪನ್ನುಗಳನ್ನು ಈ ಅಡ್ರೆಸ್ಸಿಗೆ ಕಳುಹಿಸಬೇಕು.

ಮ್ಯಾನೇಜರ್ :— **ವಿದ್ಯಾರಣ್ಯ ಪಜಿಲ್ಸ್ ನಂ. ೧೩, ಕಂಬಳಿ ಬಜಾರ್, ಬಳ್ಳಾರಿ.**

Travel by the Transport Motor Service
FOR EFFICIENCY & COMFORT

159

ಈ ವಾರದ ಕಥೆ

ಪ ತಿ ಭ ಕ್ತಿ

ಲೇ,—ಎಂ. ಕೆ. ಅನಂತರಾಜು, ಮೈಸೂರು

ಹುಂ, ಕಮಲಾ, ಎಲ್ಲಿ ಬೇಗ ದುಡ್ಡು ಕೊಡು.

ಪ್ರಿಯಾ, ದುಡ್ಡು ಎಲ್ಲಿದೆ? ಮಗುವಿಗೆ ಕುಡಿಯುವುದಕ್ಕೆ, ಹಾಲು ತರುವುದಕ್ಕೆ ದುಡ್ಡು ಇಲ್ಲದೆ ಇರುವಾಗ ತಮಗೆ ಎಲ್ಲಿಂದ ದುಡ್ಡು ತಂದುಕೊಡಲಿ, ತಾವು ಕುಡಿಯುವುದನ್ನು ಅ ಭ್ಯಾಸಮಾಡಿ ಎಲ್ಲಾ ಐಶ್ವರ್ಯವನ್ನು ಕಳೆದು ಬಿಟ್ಟಿರಿ ತಾವು ಈಗಲಾಗದರೂ ಕುಡಿಯುವುದು ಕೆಟ್ಟದೆಂದು ತಿಳಿದು ಬಿಟ್ಟುಬಿಡಿ ಎಂದು ಅವನ ಕಾಲಿಗೆ ಎರಗಿ ಬೇಡಿಕೊಂಡಳ.

ಏನು? ಕಮಲಾ! ಕುಡಿಯುವುದು ಕೆಟ್ಟದ್ದೆ, ನನಗೆ ಒದ್ದಿ ಕಲಿಸಲು ಬಂದೆಯಾ ಎಂದು ಹೇಳಿ ಕಾಲಲ್ಲಿ ಕಮಲೆಯನ್ನು ಬದೆದನು.

ಕಮಲೆಯು ಕಣ್ಣೀರಿಡುತ್ತ ಪ್ರಿಯಾ! ನನ್ನಲ್ಲಿ ಬಂದು ಕಾಸೂ ಇಲ್ಲ, ಇದ್ದದ್ದನ್ನೆಲ್ಲಾ ತಮಗೆ ಕೊಟ್ಟಿರುತ್ತೇನೆ ಎಂದಳು.

ಏನು, ಪ್ರತ್ಯುತ್ತರವನ್ನು ಕೊಡುತ್ತೀಯ, ದೇವರು ಮನುಷ್ಯರನ್ನು ಸೃಷ್ಟಿಸಿರುವುದು ಕುಡಿಯುವುದಕ್ಕೆ ಗೊತ್ತಾಯಿತೋ ಎಂದು ಹೇಳಿ ಕಮಲೆಯ ಕೈಲಿದ್ದ ಉಂಗುರವನ್ನು ತೆಗೆದು ಕೊಂಡು ಹೊರಟೇ ಹೋದನು.

ಕಮಲೆಯು ಸಿರುತ್ಸಾಹದಿಂದ ಕುಳಿತುಕೊಂಡಳು. ಕಮಲೆಯು ಚಿಂತೆಯಿಂದ ದಿನೇ ದಿನೇ ಕೃಶಳಾಗುತ್ತ ಒಂದು. ಕಮಲಾಕರನು ಇದೊಂದನ್ನೂ ಲಕ್ಷಿಸದೆ ಕುಡಿಯುವುದರಲ್ಲೇ ಮಗ್ನನಾಗಿದ್ದನು.

ಕಮಲಾಕರನು ಜೊಂಬಾಯಿನಲ್ಲಿ ಒರ್ವ ಪ್ರಸಿದ್ಧನಾವ ಪುಲ್ಲಿನ ಪ್ರೊಪ್ರೈಟರ್. ಇವನಿಗೆ ಯಾವುದರಲ್ಲಿಯೂ ಚಿಂತೆಯೇ ಇರಲಿಲ್ಲ. ಸುಂದರಳಾದ ಕಮಲೆಯು ಇವನ ಪತ್ನಿ ಒಂದು ಸಣ್ಣ ಮಗು. ದುರಾದೃಷ್ಟವಶಾತ್ ಈತನಿಗೆ ಕೆಲವು ದುಷ್ಟರ ಸಹವಾಸವಾಗಿ ಕುಡಿಯುವುದನ್ನು ಕಲಿತುಬಿಟ್ಟನು. ಕೊನೆಗೆ ತನ್ನ ಸರ್ವ ಸ್ವವೆಲ್ಲವನ್ನು ಕಳೆದುಕೊಂಡು ತನ್ನ ಹೆಂಡತಿಯ ಕೈಲಿದ್ದ ಉಂಗುರವನ್ನೂ ಸಹ ತೆಗೆದುಕೊಂಡು ಹೋಗಿ ಮೂರು ಪಟ್ಟಾಗಿ ಕುಡಿದು ಮನೆಗೆ ಬಂದನು.

ಮಾರನೆಯ ದಿನ ಯಥಾಪ್ರಕಾರ ಕಮಲಾಕರನು ಕಮಲೆಯನ್ನು ಕುರಿತು ದುಡ್ಡು ಕೇಳಿದನು. ಕಮಲೆಯು ಸಿಟ್ಟಸಿರುಬಿಟ್ಟು ಪ್ರಿಯಾ, ನನ್ನಲ್ಲಿ ಏನೂ ಇಲ್ಲ. ದಯಮಟ್ಟು ನನ್ನನ್ನು ಹಿಂಸಿಸಬೇಡಿ ಈಗಲಾದರೂ ನನ್ನ ಮಾತನ್ನು ಕೇಳಿ ಕುಡಿಯುವುದನ್ನು ಬಿಟ್ಟುಬಿಡಿ ಎಂದು ಬೇಡಿಕೊಂಡಳು.

ಕಮಲಾಕರನು ಕೋಸಗೊಂಡು ಏನೂ ಇಲ್ಲ ಎಂದು ಹೇಳುವೆಯಾ ಎಂದು ಹೇಳಿ ಅವಳ ವೈನೇಲಿದ್ದ ಮಾಂಗಲ್ಯವನು ತೆಗೆದುಕೊಂಡು ಹೊರಟುಹೋದನು. ಕಮಲೆಯು ಮೂರ್ಛೆ ಹೊಂದಿದಳು. ಆ ದಿನದ ರಾತ್ರಿ ಕಮಲಾಕರನು ಮನೆಗೆ ಹೋಗಲೇ ಇಲ್ಲ.

ಸಮಾರು ರಾತ್ರಿ ಹನ್ನೆರಡು ಗಂಟೆಯ ಸಮಯ. ಎಲ್ಲೆಲ್ಲಿಯೂ ಅಂಧಕಾರವಿದ್ದಿತು. ಒಂದೊಂದು ಹನಿಯಾಗಿ ಮಳೆಯು ಬರುತ್ತಿತ್ತು. ನಿಶ್ಶಬ್ದವು ತುಂಬಿತ್ತು. ಅಂತಹ ಸಮಯದಲ್ಲಿ ಮಾತಂಗದ ಒಂದು ಬೀದಿಯಲ್ಲಿ ಒಬ್ಬ ಅಮಾನುಷ ವ್ಯಕ್ತಿಯು ಹೋಗುತ್ತಿರುವುದನ್ನು ಕಂಡು ಒಂದು ನಾಯಿಯು ಬೊಗಳಲು ಆರಂಭಿಸಿತು ವಾಚಕರೇ ಆ ವ್ಯಕ್ತಿಯು ಯಾರೆಂಬುದನ್ನು ವರಿಯಬೇಡಿ. ನಮ್ಮ ಕಥಾನಾಯಕನಾದ ಕಮಲಾಕರನು. ಅವನು ಎಲ್ಲಿಗೆ ಹೋಗುತ್ತಾನೆಂಬುವುದನ್ನು ನೋಡೋಣ ಬನ್ನಿ.

ಕಮಲಾಕರನು ನೆಟ್ಟಗೆ ಸಾಹುಕಾರ್ ಸೇಟ್ ಜಗ್ಗೂಲಾಲ್‌ರವರ ಮನೆಯ ಕಾಂಪೌಂಡನ್ನು ಹಾರಿ ಕಾಂಪೌಂಡಿನ ಒಳಗಿದ್ದ ಮಾವಿನ ಮರದ ಸಹಾಯದಿಂದ ಕಿಟಿಕಿಯಿಂದ ಒಂದು ರೂವಿಗೆ ಬಂದನು. ಆ ರೂವಿನಲ್ಲಿ ಬೆಡ್‌ಲ್ಯಾಂಪ್ ಉರಿಯುತ್ತಿತ್ತು. ಜಗ್ಗೂಲಾಲರೂ ಸಹ ನಿದ್ರೆ ಮಾಡುತ್ತಿದ್ದರು. ಅವರ ಮಂಚದ ಪಕ್ಕದಲ್ಲಿ ಕಬ್ಬಿಣದ ಪೆಟ್ಟಿಗೆಯೂ ಇತ್ತು. ಸೇಟ್ ರವರು ಆ ಪೆಟ್ಟಿಗೆಯ ಬೀಗದೆಸಲನ್ನು ಪೆಟ್ಟಿಗೆಯ ಮೇಲೆ ಇಟ್ಟಿದ್ದರು. ಇದನ್ನು ನೋಡಿ ಕಮಲಾಕರನಿಗೆ ಬಹಳ ಸಂತೋಷವಾಯಿತು.

ಕಮಲಾಕರನು ಶಬ್ದಮಾಡದೆ ಕಬ್ಬಿಣದ ಪೆಟ್ಟಿಗೆಯನ್ನು ತೆರೆದನು. ತೆರೆದ ತಕ್ಷಣವೇ ಆ ಪೆಟ್ಟಿಗೆಯಲ್ಲಿದ್ದ ಆಟೋಮ್ಯಾಟ್ ಜೆಲ್ ಭಾರಿಸಲಾರಂಭಿಸಿತು. ಇದರ ಶಬ್ದವನ್ನು ಕೇಳಿದಕೂಡಲೇ ಸೇಟ್‌ರವರಿಗೆ ಎಚ್ಚರಿಕೆಯಾಯಿತು. ಅವರು ಎದ್ದು ಕಮಲಾಕರನನ್ನು ನೋಡಿ ಕಳ್ಳನೆಂದು ತಿಳಿದುಕೊಂಡು ತಮ್ಮ ಜವಾನನಾದ ರಾಮಸಿಂಗ್ ಎಂಬುವನೊಡನೆ ಕಮಲಾಕರನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ವಾಚಕರೇ ನಮ್ಮ ಹೀನ ಅದೃಷ್ಟಳಾದ ಕಮಲೆಯನ್ನು ನೋಡೋಣ ಬನ್ನಿ.

ಕಮಲೆಯು ರಾತ್ರೆ ಹೋದ ತನ್ನ ಗಂಡನು ಬೆಳಗ್ಗೆ ಒಂಭತ್ತು ಗಂಟೆಯಾದರೂ ಒರೆಲು ಏನೋ ಅನರ್ಥವಾಗಿದೆಯೆಂದು ತಿಳಿದುಕೊಂಡು ಅವನನ್ನು ಹುಡಕಲು ಆರಂಭಿಸಿದಳ. ಎಷ್ಟು ಅಲೆದರೂ ತನ್ನ ಪತಿಯನ್ನು ಕಾಣದೆ ಮನೆಗೆ ಹಿಂದಿರುಗಿದಳು ಸುಮಾರು ಸಾಯಂಕಾಲ ಐದೂವರೆ ಗಂಟೆ ಸಮಯ. ಕಮಲಾಕರನ ಹಳೆಯ ಸ್ನೇಹಿತನಾದ ಮದನಸೇನನು ಕಮಲಾಕರನ ಮನೆಗೆ ಬಂದು ಕಮಲಾಕರನು ಜೈಲಿನಲ್ಲಿರುವುದನ್ನೂ ಮತ್ತು ನಾಳೆ ಕೋರ್ಟಿನಲ್ಲಿ ವಿಚಾರಣೆಯೆಯೆಂದು ಕಮಲೆಗೆ ತಿಳಿಸಿದನು. ಈ ವರ್ತಮಾನವನ್ನು ಕೇಳಿದ ಕಮಲೆಗೆ ಸಿಡಿಲು ಬಡಿದಂತಾಯಿತು. ಕೂಡಲೇ ಅಲ್ಲಿಂದೆ ಎದ್ದು ತನ್ನ ಪತಿಯಿರುವ ಜೈಲಿಗೆ ಹೋದಳು. ಪತಿಯನ್ನು ಕಂಡು ಗೋಳಿಡುತ್ತ ಮಾತನಾಡಿಸಲು ಪ್ರಯತ್ನಿಸಿದಳು. ಅಲ್ಲಿಯ ಜವಾನರು ಅವಕ್ಕೆ ಅವಕಾಶ ಕೊಡಲಿಲ್ಲ. ಕಮಲೆಯು ಅಲ್ಲಿಂದ ಹೊಂಟು ಜಡ್ಜಿಯ ಮನೆಯನ್ನು ಹುಡುಕಿಕೊಂಡು ರಾತ್ರಿ ಒಂಭತ್ತೂವರೆ ಘಂಟೆ ಹೊತ್ತಿನಲ್ಲಿ ಜಡ್ಜಿಯನು ಮನೆಗೆ ಬಂದಳು. ಆ ಜಡ್ಜಿಯು ಸನ್ನಿಪಾತಕ್ಕೆ ಬಂದು ಎರಡು ಕಾಲನ್ನು ಹಿಡಿದುಕೊಂಡು ಸ್ವಾಮಿ, ಅನಾಥಳಾದ ನನ್ನನ್ನು ಕಾಪಾಡಿ ನನ್ನ ಮೇಲೆ ಕೃಪೆಯಿಟ್ಟು ನನ್ನ ಪ್ರಾಣಪತಿಯನ್ನು ದಯಪಾಲಿಸಿ. ಸ್ತ್ರೀಯರಿಗೆ ಪತಿಯೇ ಸರ್ವಸ್ವ. ಅಂತಹ ಪತಿಯೇ ಇಲ್ಲದಿದ್ದ ಮೇಲೆ ಸ್ತ್ರೀಯರಿದ್ದು ಏನು ಪ್ರಯೋಜನ ನಿಮಗೆ ನನ್ನಂತಹ ಹೆಣ್ಣನುಕ್ಕಳಿಲ್ಲವೇ, ಎಂದು ದೈನ್ಯಭಾವದಿಂದ ಜಡ್ಜಿಯನ್ನು ಬೇಡಿಕೊಂಡಳು.

ಜಡ್ಜಿಗೆ ಕರುಣೆಹುಟ್ಟಿ ಆ ಕಮಲೆಯು ಎಲ್ಲಾ ಸಮಾಚಾರವನ್ನು ತಿಳಿದುಕೊಂಡು ಅಮ್ಮಾ, ನಿನ್ನ ಯಜಮಾನನು ತಪ್ಪು ಮಾಡಿದ್ದಾನೆ. ಆ ತಪ್ಪಿಗೆ ತಕ್ಕಂತೆ ಶಿಕ್ಷೆಯು ಆಗಲೇಬೇಕು. ಆದ್ದರಿಂದ ನಾನು ನಾಳೆ ನಿನ್ನ ಗಂಡನ ವಿಚಾರದಲ್ಲಿ ತೀರ್ಪನ್ನು ಕೊಡುತ್ತೇನೆ. ಏನೆಂದರೆ ನಿನ್ನ ಗಂಡನು ಮಾಡಿರುವ ತಪ್ಪಿಗೆ ಆರು ತಿಂಗಳ ಕಠಿಣ ಸಜವೂ ಇಲ್ಲದಿದ್ದರೆ 150 ರೂಪಾಯಿ ಜುಲ್ಮಾನೆಯನ್ನು ಕೊಡಬೇಕೆಂದು ತೀರ್ಮಾನಿಸಿದ್ದರಿಂದ ಕಮಲಾ ಈ 150 ರೂಪಾಯಿಗಳನ್ನು ತೆಗೆದುಕೋ. ನಾಳೆ ದಿನ 11 ಘಂಟೆಗೆ ಕೋರ್ಟಿಗೆ ಬಂದು ನಿನ್ನ ಪತಿಯನ್ನು ಬಿಡಿಸಿಕೊಂಡು ಹೋಗು ಎಂದು ಪ್ರೀತಿಯಿಂದ ಹೇಳಿದನು. ಅದನ್ನು ಕೇಳಿ ಕಮಲೆಯು ಜಡ್ಜಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಮನೆಗೆ ಬಂದಳು.

ಮಾರನೇ ದಿನ ಕಮಲೆಯು ಅತ್ಯಾನಂದದಿಂದ 11 ಘಂಟೆಗೆ ಕೋರ್ಟಿನ ಬಳಿ ಬಂದಳು. ಜಡ್ಜಿಯು ನೆನ್ನೆ ರಾತ್ರಿ ಕಮಲೆಗೆ ಹೇಳಿದಂತೆ ತೀರ್ಮಾನಿಸಿದನು. ಕೂಡಲೆ ಕಮಲೆಯು ತನ್ನ ಪತಿಯನ್ನು ತಬ್ಬಿಕೊಂಡು ಬಹಳವಾಗಿ ಆನಂದಪಟ್ಟಳು. ಕಮಲಾಕರನು ಮತ್ತು ಕಮಲೆಯು ಮನೆಗೆ ಹಿಂದಿರುಗಿದರು. ಆ ದಿನ ಸಾಯಂಕಾಲ ಕಮಲೆಯು ಮತ್ತು ಕಮಲಾಕರನು ಜಡ್ಜಿಯ ಮನೆಗೆ ಬಂದು ತಮ್ಮ ಹೃತ್ಪೂರ್ವಕ ವಂದನೆಗಳನ್ನು ಜಡ್ಜಿಗೆ ಸಲ್ಲಿಸಿದರು

ಜಡ್ಜಿಯು ಕಮಲಾಕರನಿಗೆ ಬುದ್ಧಿಕಲಸಿ ತನ್ನ ಆಫೀಸಿನಲ್ಲಿ 50 ರೂಪಾಯಿ ಸಂಬಳ ಇರುವ ಸಾಮಾನ್ಯ ಒಂದು ಕೆಲಸವನ್ನು ಕೊಟ್ಟು ಆ ಒಡ ಸಂಸಾರವನ್ನು ಸಂರಕ್ಷಿಸಿದನು.

— ಸಂಪೂರ್ಣಂ —

ಚೀನಿಯ ಸೇನೆಗಳು ಜಪಾನರಿಂದ (ಬರ್ಮದ) ಮೆಮ್ಯೋ ನಗರವನ್ನು ತಿರುಗಿ ಹಿಡಿದರುವುದಾಗಿ ಸಮಾಚಾರ ಬಂದಿದೆ.

೦ ೦ ೦

ಸಿಲೋನಿಗೆ ಈಚಿಗೆ ಪೂರ್ವ ಆಫ್ರಿಕದಿಂದ ಹೊಸ ಸೈನ್ಯಗಳು ಬಂದಿಳಿದಿವೆ.

ಈ ವಾರದ ಭವಿಷ್ಯ

ಮೇಷ

ಈ ವಾರವು ಅನುಕೂಲವಾಗಿಯೇ ಇರುವುದು. ಕೆಲಸಕಾರ್ಯಗಳಲ್ಲಿ ತೊಂದರೆಗಳಿಲ್ಲ ಬಂಧುಮಿತ್ರರ ಸಹಾಯವಿದೆ ಧನಾಗಮನ ತಕ್ಕಮಟ್ಟಿಗಿರುವುದ. ಆದರೂ ಮಾನಸಿಕ ತ್ರಾಸ ತಪ್ಪಿದ್ದಲ್ಲ.

ವೃಷಭ

ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಎಷ್ಟೋ ಏಧವಾದ ಕಾರ್ಯಕಲ್ಪಾಪಗಳನ್ನು ನೆಡೆಸುವಿರಿ ಸಂಸಾರದಲ್ಲಿ ಸುಖವಿದೆ. ಮಿತ್ರರಲ್ಲಿ ಮನಸ್ತಾಪ ಉಂಟಾದೀತು.

ಮಿಥುನ

ಇದ್ದಿದ್ದರಲ್ಲಿ ತೃಪ್ತಿಪಟ್ಟಕೊಂಡು ಕಾರ್ಯನಿರ್ವಹಿಸಿ. ಬೇರೆ ಹೊಸ ಯೋಜನಗಳನ್ನು ತಲೆಗೆ ಹತ್ತಿಸಿಕೊಳ್ಳಬೇಡಿ. ನಿಮಗೆ ಸ್ವಲ್ಪ ನಷ್ಟಕಾಲವೇ ಸರಿ, ನದಗ್ರಹಾರಾಧನೆ ಮಾಡಿ ಒಳ್ಳೆಯದಾಗುವುದು

ಕರ್ಕಾಟಕ

ಸಧ್ಯ ನೀವೇ ಪುಣ್ಯವಂತರು. ಕೆಲಸಗಳು ಕೈಗೂಡುವವು ಸ್ನಪರಜನುಲ್ಲಿ ಮಾನಸನನ್ಮಾನ ಲಭಿಸುವ್ರದು, ಸಾಂಪತ್ತಿಕ ಸ್ಥಿತಿ ಉತ್ತಮಗೊಳ್ಳುವುದು

ಸಿಂಹ

ಸಿಂಹದ ಧೈರ್ಯದಿಂದ ವರ್ತಿಸಿರಿ. ನಿಮಗೆ ಒಳ್ಳೇ ಅನುಕೂಲಗಳಿವೆ ಅಧಿಕಾರಿ ವರ್ಗದಿಂದ ಸಹಾಯವಿದೆ ದುಡ್ಡಿನ ತಾಪತ್ರಯ ತಗ್ಗುವುದು.

ಕನ್ಯಾ

ಮಧ್ಯಮ ಫಲ. ಲೆಕ್ಕಿಸತಕ್ಕ ಅಂತಹ ಅನುಕೂಲಗಳಾಗಲೀ, ಅನಾನುಕೂಲಗಳಾಗಲೀ ಕಾಣಬರುವುದಿಲ್ಲ.

ತುಲಾ

ಅಧಿಕಾರಿ ವರ್ಗದಿಂದ ಸ್ವಲ್ಪ ಅನುಕೂಲವಿದೆ. ಆರ್ಥಿಕ ವಿಷಯದಲ್ಲಿ ಹೇಳತೀರದು.

ವೃಶ್ಚಿಕ

ಮಧ್ಯಮ ಫಲ, ಖರ್ಚು ಹೆಚ್ಚಾಗಿದೆ, ಚಿಕ್ಕ ಪುಟ್ಟ ಚಿಂತೆಗಳು.

ಧನು

ನಿಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳುವವು. ಹಣ, ಮಾನಮರ್ಯಾದೆ ಲಭಿಸುವುದು.

ಮಕರ

ಯೋಜನಗಳೇನೋ ನಿಮ್ಮ ತಲೆಯಲ್ಲಿ ತುಂಬಿವೆ. ಆದರೂ ಸ್ವಲ್ಪ ತಾಪತ್ರಯವಿದ್ದಲ್ಲಿ ಕಾಲ ತಳ್ಳಬೇಕು. ಇಷ್ಟದೇವತಾರಾಧನೆ ಮಾಡಿ ಶುಭಫಲ.

ಕುಂಭ

ನೀವೇನೂ ಮುಂಕಾಗಿಯಾಗಲೀ, ಚಿಂತಿಸುತ್ತಲಾಗಲೀ ಕುಳಿತಿರಬೇಕಾಗಿಲ್ಲ. ನಿಮ್ಮ ಸ್ಥಿತಿ ಉತ್ತಮಗೊಳ್ಳುವುದು. ನಿಮ್ಮ ವಿದ್ಯಾಬುದ್ಧಿ ಪ್ರಕಾಶಗೊಳ್ಳುವುದು.

ಮೀನ

ನೀವೇನೂ ಅಂತಹ ಆತಂಕ ಪಟ್ಟುಕೊಳ್ಳಬೇಕಾಗಿಲ್ಲ. ಸ್ವಲ್ಪ ಕಷ್ಟನಷ್ಟಗಳು ಇನ್ನೂ ಆವರಿಸಿಕೊಂಡಿವೆ.

ಆನಂದವಿಹಾರ ನಂ. 21

— ಬಹುಮಾನ ಪಡೆದವರ ಪಟ್ಟಿ —

ಸರಿಯಾ ಉತ್ತರವು ಯಾರಿಂದಲೂ ಬರಲಿಲ್ಲವಾದ್ದರಿಂದ ಬಂದು ತಪ್ಪಿನ ಉತ್ತರಕ್ಕೆ ಪ್ರಥಮ ಬಹುಮಾನ ಇಬ್ಬರಿಗೆ ಕೊಡಲಾಗಿದೆ, ತಲಾ ರೂ 77–8–0.

ಎಸ್. ನಾರಾಯಣಸ್ವಾಮಿ, ಕಳಾಸಿಪಾಳ್ಯಂ ಬೆಂಗಳೂರು; ಎಂ. ಎಸ್. ವೇಣುಗೋಪಾಲ್ ಪುತ್ತೂರು.

ಎಲ್ಲರಿಗಿಂತಲೂ ಹೆಚ್ಚಿಗೆ ಕೂಪರ್‌ಗಳನ್ನು ಕೆಳುಬಸಿದ (ಅಂದರೆ 60) ಎಸ್ ನಾರಾಯಣ ಸ್ವಾಮಿ ಕಳಾಸಿಪಾಳ್ಯಂ ಬೆಂಗಳೂರು ಸಿಟಿ., ಇವರಿಗೆ ಕೈಗಡಿಯಾರ ಕೊಡಲಾಯಿತು.

2 ತಪ್ಪಿನವರು 5 ಜನ, ತಲಾ 10-0-0 ರೂ. ಪಿ. ಕೃಷ್ಣಯ್ಯ ಬೆಂಗಳೂರು, ವಿ. ಪಿ. ರಂಗಯ್ಯ ಬೆಂಗಳೂರು, ಬಿ. ಎಂ. ಸಂಜೀವಯ್ಯ, ಎಕ್. ಎ. ರಂಗಸ್ವಾಮಿ ಮೈಸೂರು, ನರಸಿಂಹಮೂರ್ತಿ ನಗ್ಗೆಹಳ್ಳಿ.

3 ತಪ್ಪಿನ ಉತ್ತರವನ್ನು ಕಳುಹಿಸಿದ 15 ಜನರಿಗೆ ತಲಾ 2–0–0 ರೂ.

4 ತಪ್ಪಿನ ಉತ್ತರವನ್ನು ಕಳುಹಿಸಿದ 40 ಜನರಿಗೆ ತಲಾ 8 ಆಣೆ ಸ್ಥಳ ಸಂಕೋಚದಿಂದ 3 ಮತ್ತು 4 ತಪ್ಪಿನ ಪೋಟೋದಾರರ ಹೆಸರು ಮುದ್ರಿಸಲು ಆಗಲಿಲ್ಲದ್ದಕ್ಕೆ ವಿಷಾದಿಸುತ್ತೇವೆ.

ಬಹುಮಾನದ ಮೊಬಲಗು ಎಲ್ಲರಿಗೂ 28-5-42 ನೇ ದಿವಸ ಪಾವತಿ ಮಾಡಲಾಗುವುದು. ಮೈಸೂರಿನವರು ಮೊಕ್ಕಾರ್ ಅಂಡ್ ಕಂಪೆನಿಯಲ್ಲಿ ಖುದ್ದಾಗಿ ಹಾಜರಾಪಡಿಸಿ ಬಹುಮಾನ ಪಡೆಯಬಹುದು.

ಮ್ಯಾನೇಜರ್.

ವಿನೋದರಂಜಿನಿ ನಂ. 4

ಬಹುಮಾನ ಪಡೆದವರು

ಸರಿಯಾದ ಉತ್ತರ ಕಳುಹಿಸಿದ ಇಬ್ಬರಿಗೆ 12–8–0 ಯಂತೆ ಬಹುಮಾನ. ಎಸ್. ಕೆ. ಮೂರ್ತಿ, ಎಸ್. ನರಸಮ್ಮ, ಮೈಸೂರು.

1 ತಪ್ಪಿನ ಉತ್ತರ ಕಳುಹಿಸಿದವರಿಗೆ ತಲಾ 1–0–0 ಬಹುಮಾನ.

ಎಂ. ಆರ್. ಅಣ್ಣಾಜಿರಾವ್, ಶ್ರೀ ಶಾರದಮ್ಮ, ಎಂ. ವೆಂಕಟರಾವ್ ಬೆಂಗಳೂರು, ಟಿ. ರಾಮರಾವ್, ಶ್ರೀ ಸಾವಿತ್ರಮ್ಮ, ಶ್ರೀ ಪದ್ಮಾವತಿಬಾಯಿ ಮೈಸೂರು, ಎಂ. ನಾರಾಯಣರಾವ್ ಚನ್ನಪಟ್ಣ

2 ತಪ್ಪಿನ ಉತ್ತರ ಕಳುಹಿಸಿದವರಿಗೆ ತಲಾ 0–8–0 ಬಹುಮಾನ.

ಶ್ರೀ ನಾಗರತ್ನಮ್ಮ ಬಳ್ಳಾರಿ, ಟಿ. ವೆಂಕಟಪ್ಪ, ಟಿ. ವಿ. ವಿ, ಪತಿ ಬೆಂಗಳೂರು, ಎಸ್. ಜಯರಾವ್, ನೆಂ.ವಂಗಲ, ಎಕ್. ಶ್ರೀಕಂಠಯ್ಯ, ವಿ. ಎಸ್. ಶ್ರೀಪತಿರಾವ್, ಕೆ. ಎಸ್. ಎಸ್. ಮೂರ್ತಿ, ಹೆಚ್. ಎಸ್. ರಾಮಸ್ವಾಮಿ. ಮೈಸೂರು.

3 ತಪ್ಪಿನ ಉತ್ತರ ಕಳುಹಿಸಿದವರು ವಿನೋದರಂಜಿನಿ ನಂ. 5 ಕ್ಕೆ ತಾವು ಕಳುಹಿಸುವ ಪೇಡ್ ಕೂಪನ್ ಜೊತೆಗೆ ಒಂದು ಉಚಿತ ಕೂಪನ್ನನ್ನು ಕಳುಹಿಸಬಹುದು.

ಆರ್ ನಾರಾಯಣಸ್ವಾಮಿ, ವೈ. ಆರ್, ಮಹಾಬಲಪ್ಪ, ಸಾಗರ, ಪಿ.ಜಿ ಪಾರ್ಥಸಾರಥಿ. ವಿ. ಎಕ್.ಶಾಂತಾಬಾಯಿ ಟಿ.ಎಕ್.ಪ್ರಸನ್ನ, ಹೆಚ್. ಎಕ್.ವಿ.ಮೂರ್ತಿ, ಎಸ್. ಆರ್. ಕೃಷ್ಣಸ್ವಾಮಿ ಮೈಸೂರು, ಹೆಚ್. ಎಕ್. ನರಸಿಂಹಯ್ಯ ಚಿಕ್ಕನಾಯ್ಕನಹಳ್ಳಿ.

ಬಹುಮಾನವು ಈ ತಿಂಗಳು 30 ನೇ ತಾರೀ ತಾರೀಖುನಂತರ ಪಾವತಿಮಾಡಲಾಗುತ್ತೆ. 27 ನೆ ತಾರೀಖಿನನಂತರ ನಂ. 4 ಕ್ಕೆ ಸಂಬಂಧಿಸಿದ ಯಾವ ಕಾಗದಪತ್ರಗಳೂ ನನ್ನಲ್ಲಿಟ್ಟುಕೊಂಡಿರುವುದಿಲ್ಲ. ಮ್ಯಾನೇಜರ್

ವಿನೋದರಂಜಿನಿ ನಂ. 5, ಬಹುಮಾನ ರೂ. 100

ಮೊದಲನೆ ಬಹುಮಾನ ರೂ. 60. ಇತರ ಬಹುಮಾನ ರೂ. 40.

ಪ್ರವೇಶಧನ 1 ಉತ್ತರಕ್ಕೆ 3 ಆಣೆ, 4 ಉತ್ತರಗಳಿಗೆ 8 ಆಣೆ, ಉತ್ತರ ತಲಪಿಸಲು ಕಡೇ ತಾ. 6-6-42 ಸರಿಯಾದ ಉತ್ತರ 10–6–42 ನೇ ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವುದು.

ನಿಬಂಧನೆಗಳು ಮಾಮೂಲಿನಂತೆ. ಎಲ್ಲರೂ ಮ್ಯಾನೇಜರ ತೀರ್ಮಾನಕ್ಕೆ ಬದ್ಧರಾಗಿರಬೇಕು

ಮ್ಯಾನೇಜರ್ **ವಿನೋದರಂಜಿನಿ** C|o ಸತ್ಯವಾದಿ ಆಫೀಸು, ಚಾಮರಾಜಪುರಂ, ಮೈಸೂರು ಮೈಸೂರಿನವರು ಲ್ಯಾಕ್ಸ್‌ಡೌನ್ ಬಜಾರಿನಲ್ಲಿರುವ ಮೊಕ್ಕಾರ್ ಕಂಪೆನಿಯಲ್ಲಿ ಕೊಡಬಹುದು

ಕೆಳಗೆ ಕೊಟ್ಟಿರುವ ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಸೂಚನೆಗಳಿಗನುಸಾರವಾಗಿ ಸೇರಿಸಬೇಕು.

ಪದಗಳು	ಸೂಚನೆಗಳು	ಉತ್ತರ
(1) — ಧೀಜಿ	ಅಹಿಂಸಾವ್ರತಧಾರಿ	
(2) — ವ	ಉಮಾಪತಿ, ಮಹೇಶ್ವರ	
(3) ..ಕ —	ಶಾಖಾಹಾರಿಯಾದ ಮೃಗ	
(4) — ಲೆಂಡ್	ಹಿಟ್ಲರ್ ಪಶುಬಲಕ್ಕೆ ಆಹುತಿಯಾಗಿರುವ ದೇಶಗಳಲ್ಲೊಂದು	
(5) —ನ್ನ— ನಾಡು	ಮೈಸೂರು ಇಂತಹ ನಾಡಲ್ಲವೇ ?	
(6) — ಪತಿ	ಇವರು ಪ್ರಜಾವತ್ಸಲರಾಗಿರಬೇಕು.	

ಹೆಸರು ಕೂ. ನಂ

ವಿಳಾಸ ಪೊ. ಆ. ನಂ.

161

ಯುದ್ಧ ಸಮಾಚಾರ

ಅಮೆರಿಕಕ್ಕೆ ವಿಮಾನಗಳು ಯುನ್ನಾನ್ ಇಂಡೋ ಚೀನಾ ರೈಲ್ವೆ ಮೇಲೆ ಬಲವಾಗಿ ಧಾಳಿ ನಡೆಸಿದವು. ಅನೇಕ ಜಪಾನೀ ಟ್ರಕ್‌ಗಳೂ ಎಂಜಿನ್‌ಗಳೂ ನಾಶವಾಗಿವೆ.

ಂ ಂ ಂ

ಖಾರ್‌ಕೋವ್ ಪ್ರದೇಶದಲ್ಲಿ ರಷ್ಯನರು ಅನೇಕ ಕಡೆಗಳಲ್ಲಿ ಮುಂದೆ ನುಗ್ಗಿದ್ದಾರೆ. ಮತ್ತು ಹನ್ನೆರಡು ಸಾವಿರಕ್ಕೆ ಮೇಲ್ಪಟ್ಟು ಜರ್ಮನರನ್ನು ಕೈಸೆರೆ ಹಿಡಿದಿದ್ದಾರೆ.

ಂ ಂ ಂ

ಶತ್ರುವಿಮಾನಗಳು ಪೂರ್ವ ಅಸ್ಸಾಮಿನ ಒಂದು ಪಟ್ಟಣದ ಮೇಲೆ ಬಾಂಬುಗಳನ್ನು ಹಾಕಿದವು. ಆದರೆ ಸಾವುನೋವುಗಳು ಬಹಳ ಕಡಮೆಯಾಗಿವೆ. ನಷ್ಟವೂ ಅತ್ಯಲ್ಪ.

ಂ ಂ ಂ

ಬರ್ಮಾದಲ್ಲಿಯ ಬ್ರಿಟಿಷ್ ಸೈನ್ಯಗಳನ್ನು ಸುತ್ತುಗಟ್ಟಲು ಜಪಾನೀಯರು ನಡೆಸಿದ ಪ್ರಯತ್ನವು ಈಗ ಪರಾಜಯ ಹೊಂದಿದೆ.

ಂ ಂ ಂ

ಖಾರ್‌ಕೋವ್ ಬಳಿಯ ಕದನವು ಉಗ್ರವಾಗ ತೊಡಗಿದೆ, ಆದರೂ ರಷ್ಯನರ ಮುಂದೋಟವು ಬಲವಾಗಿದೆ.

ಂ ಂ ಂ

ಮುಂಗಾರು ಮಳೆಯು ನಿಲ್ಲುವವರೆಗಾದರೂ ಜಪಾನೀಯರು ಇಂಡಿಯಾದ ಮೇಲೆ ದಂಡೆಯಾತ್ರೆ ನಡೆಸದಂತೆ ಬ್ರಿಟಿಷ್ ಸೈನ್ಯಗಳು ಹೋರಾಟ ನಡೆಸಿವೆ.

ಂ ಂ ಂ

ಹಾಲೆಂಡಿನಲ್ಲಿ ಜರ್ಮನ್ ಕಮ್ಯಾಂಡರರ ಆಜ್ಞೆಯ ಮೇಲೆ ಒಳ ಜನ ಡಚ್ಚರನ್ನು ಗುಂಡಿಟ್ಟೇಟಿನಿಂದ ಹೊಡೆದು ಸಾಯಿಸಲಾಯಿತು.

ಂ ಂ ಂ

ಕಮ್ಯೂನಿಸ್ಟ್ ಕಾರ್ಯಕಲಾಪಗಳಲ್ಲಿ ಭಾಗ ವಹಿಸಿದ್ದರೆಂಬ ಅಪಾದನೆ ಮೇಲೆ ಆರು ಜನ ಫ್ರೆಂಚರನ್ನು ಪ್ಯಾರಿಸಿನಲ್ಲಿ ಸ್ಪೆಷಲ್ ಕೋರ್ಟಿನಲ್ಲಿ ಮರಣದಂಡನೆಗೆ ಗುರಿಮಾಡಲಾಗಿದೆ.

ಂ ಂ ಂ

ಪ್ಯಾರಿಸಿನಲ್ಲಿ ಬಾಂಬನ್ನು ಎಸೆಯುವ ಹೊಸ ಘಟನೆಗಳು ನಡೆದಿದೆ ಜರ್ಮನ್ ಸೈನ್ಯಗಳು ಇರುವಂತಹ ಪ್ಯಾರಿಸಿನ ಹೋಟೆಲುಗಳಲ್ಲಿಯೂ ವಿಶ್ರಾಂತಿಗೃಹಗಳಲ್ಲಿಯೂ ಅನೇಕ ಬಾಂಬುಗಳನ್ನು ಎಸೆಯಲಾಗಿದೆ.

ಂ ಂ ಂ

ಗೆರಿಲ್ಲಾ ಯುದ್ಧ ರೀತಿಯನ್ನು ತಿಳಿಸಲು ಪ್ರತಿ ಪ್ರಾಂತದಲ್ಲಿಯೂ ಒಂದೆರಡು ಕಡೆಗಳಲ್ಲಿ ಸ್ಕೂಲುಗಳನ್ನು ಇಂಡಿಯಾ ಸರ್ಕಾರವು ಸ್ಥಾಪಿಸಬೇಕೆಂದು ಡಾ|| ಬಿ. ಎಸ್. ಮೂಂಜೆಯವರು ಕಲ್ಕತ್ತಾದ ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿದರು. ಭಾರತವು ಆಕ್ರಮಣವಾಗುವ ಕಾಲವು ಬಂದಾಗ ತನ್ನ ಸಲಹೆಗೆ ಸರಕಾರವು ಪೂರ್ಣ ಗಮನವನ್ನು ಕೊಡುವುದೆಂದು ಅವರು ಆಶಿಸಿದರು.

Suggestions for Commonsense Crossword No. 245

Closing Date 5th June 1942

BANKERS

Across

1 Asleep 5 Caned 8 Pitfall 11 Liarff 15 Aver 17 Pry 22 Karma 26 Sin 33 Days.

Down

2 Lithe 3 Etc 5 Clap 6 Nrfrredseta 12 Repel 13 Aviator 16 Ram 21 Sun 28 Glad 30 Once.

ALTERNATIVES

Across

14 Hamper, Pamper, Tamper 18 Age, Ale 20 Deeds, Feeds, Meeds Needs 24 Bold, Cold 25 Mad, Man 27 Dogged, Fogged, Bogged 29 Fees, Woes, Noes 31 Bent, Cant, Rent 34 Cake, Cane, Care 35 Lewd, Loud 36 Life, Wife.

Down

4 Palace, Palate 7 Does, Dyes 9 Limb, Limp 10½ Crang, Prank 19 Gamely, Lamely 23 Rag, Rig 27 Bull, Doll, Dull, Full 32 Pen, Pep, Peg.

WANTED

A Second hand Cylinder Printing Machinel Demy Size, any make, should be in good working Gandition.

The Manager
Sattyavadi Press, Mysore.

ನೌಕಾದಳ ಸೇರಲು ಬಂದ ಒಬ್ಬನನ್ನು ಕುರಿತು "ನಿನಗೆ ಈಜುವುದಕ್ಕೆ ಬರುತ್ತೇನಯ್ಯಾ" ಎಂದು ಕೇಳಿದರು.

ಅದಕ್ಕೆ "ಯಾಕೆ ಈಜುವುದಕ್ಕೆ ಒರಬೇಕು; ನಿಮ್ಮಲ್ಲಿ ದೋಣಿಗಳಿಲ್ಲವೇ" ಎಂದ ಆ ಭೂಪ!

ಮತ್ತೆ ಗಾಂಧೀಜಿಯವರ ಮುಖಂಡತ್ವವೇ !

ಅಲಹಾಬಾದಿನ ಠರಾವುಗಳು ದೇಶದಲ್ಲಿ ತೃಪ್ತಿಯನ್ನುಂಟುಮಾಡಿಲ್ಲ. ಕಾಂಗ್ರೆಸ್ಸಿನಲ್ಲಿ ಬೇಕಾದುದು ಐಕ್ಯತೆ, ಆದರೆ ಇಂದು ಬಡತನ ಹೆಚ್ಚಿಸುತ್ತಿದೆ. ಆದುದರಿಂದ ಮತ್ತೆ ಗಾಂಧೀಜಿಯವರ ಮುಖಂಡತ್ವವೇ ಕಾಂಗ್ರೆಸ್ಸಿಗೆ ಒದಗಬಹುದು.

ಸ್ಪರ್ಧೆಗಳ ಸಲಹೆಗಳು

ಮುಂದಿನವಾರ

When you desire to buy or sell Houses & Sites Govt. Loan Bonds Shares of Companies apply to

The Satyavadi Ltd., Mysore

For Good Printing

CONSULT

Saraswati Printing Press

SHAKTI SUDHA

Sanjivini in complete form
Holy sages of Ind proclaim so.
As blood purifier it stands unrivalled
Know this secret, use and benefit.
Turns away nervous debilitz and premature death
Improves health, vigour and vitality.
Senelity disappears,
Urinal disorders turn their backs.
Divine thoughts enter the system
Hellish ideas loose their hold
All this will be yours.

By the regular use of SHAKTI SUDHA

Price Re. 1. Order now from—

'Shakti Sudha'
c/o Satyavadi Office
Chamarajpuram. Mysore

Mysore Agents—
Dhanvantari Vaidyasala
Lansdowne Buildings, Mysore

Edited, Printed & published by M.S. Krishna Rao, at the Satyavadi Press Chamaraja Agrahar, Mysore.

In your interest
& country's interest
BE....A....REGULAR
..... READER OF .....

HARIJAN
Mahatma Gandhi's Paper

Mysore Agent : N. Dasappa,

ಸತ್ಯವಾದಿ
ಅರಮನೆ ಸರಸ್ತೇದಾರ್ ಎಂ.ಪಿ.ಸುಬ್ಬರಾಯರಿಂದ ಪ್ರತಿಷ್ಠಿತವಾದ್ದು
Proprietors— Satyavadi Ltd, Mysore
ಬಿ. ಸೆಕ್ಷನ್ 20—5—42

To Let

NEW OPERA TALKIEs
(The Beauty Spot of Mysore)

From 21-5-42

2nd Week

TRIUMPHANT

MALAN

MORNING SHOWS

at 10 a. m.

From 22 nd to 25 th May 1942

" 21 Days Together "

ಜರ್ಮನಿಗೆ ಗಂಡಾಂತರವೇ!

ಪ್ರಪಂಚನಸ್ಥೆಲ್ಲಾ (25,000 ಮೈಲಿಗಳಷ್ಟು ಎಲ್ಲೂ ನಿಲ್ಲದೇನೇ ಸತ್ತಿಕೊಂಡು ಬರಬಹುದಾದಂತಹ "ಸೂಪರ್ ಬಾಂಬರ್" ಗಳನ್ನು ಅಮೇರಿಕಾದವರು ತಯಾರಿಸಲೆಳಿಸಿರುವರು. ಇದು ಕಾರ್ಯತಃ ಆದಲ್ಲಿ ಜರ್ಮನಿಯೂ ಅಕ್ಸಿಸ್ ರಾಷ್ಟ್ರಗಳೂ ಒಹುಬೇಗ ಸ್ವಾಮಿಪಾದವನ್ನು ಸೇರಿ, ಮಿತ್ರಮಂಡಲಿಯು ಶೀಘ್ರವಾಗಿ ವಿಜಯಿಗಳಾಗಿ ಪ್ರಪಂಚದಲ್ಲಿ ಸುಖಶಾಂತಿ ಬೇಗ ನೆಲಸಬಹುದು.

ಹಿಟ್ಲರಿನ ವಸಂತಮುತುವಿನ ಧಾಳಿ

ರಷ್ಯಾ ಮೇಲೆ ಹಿಟ್ಲರ್ ಧಾಳಿ ಪ್ರಾರಂಭವಾಯಿತು. ಸುಮಾರು 24 ಸಶಸ್ತ್ರ ಸಜ್ಜಿತ ಸೈನ್ಯ ಪಡೆಗಳು ಸಾವಿರ ಎರಡು ಸಾವಿರದಷ್ಟು ವಿಮಾನಗಳೂ ಬೇಕಾದಷ್ಟು ಕಾಲಾಳುಗಳೂ ಸೋವಿಯಟ್ ಸೈನ್ಯದ ಮೇಲೆ ಸುಗ್ಗಿವೆ. ರಷ್ಯಾದ ಕೆಂಪು ಸೈನ್ಯಗಳೂ ಕಳ್ಳೇಪುರಿ ತಿನ್ನುತ್ತಾ ಕುಳಿತಿಲ್ಲ. ನಾಜಿ ಭಾರಿ ದಾಳಿಯನ್ನು ಎದುರಿಸಲು ತಕ್ಕ ಏರ್ಪಾಡುಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡಿದೆ. ಹಿಟ್ಲರ್ ಸ್ಟಾಲಿರ್ನ ಸೈನ್ಯದ ಹೊಡೆದಾಟವು ರಾಕ್ಷಸರ ಹೊಡೆದಾಟದಂತಿದೆ. ಹಿಟ್ಲರು ಬೇಗ ಗೆದ್ದರೆ ಬದುಕಿಕೊಂಡ, ತಪ್ಪಿದಲ್ಲಿ ಇನ್ನೊಂದು ಚಳಿಗಾಲ ಬರುವ ತನಕ ಕದನ ನಡೆದರೆ, ಸ್ಟಾಲಿನ್ ನಾಜಿ ಸೈನ್ಯವನ್ನು ನುಚ್ಚುನೂರು ಮಾಡಿ ಹಿಟ್ಲರನ್ನು ಸಂಪೂರ್ಣವಾಗಿ ಸೋಲಿಸುವುದು ಖಂಡಿತ.

ಹಾಲು ಪಾನೀಯಗಳು ನಮ್ಮಲ್ಲಿ ಒಂದು ವಿಶೇಷವೇ ನರಿ!

ಕೆನೆ, ಬೆಣ್ಣೆ ಅತಿ ಮಧುರವಾದ ಕ್ರೀಮ್, ಮೊಸರು

ಇವುಗಳಿಗೆ ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ.

ಸಿಟಿನನ್ ಡೈರಿ

ಟೆಲಿಫೋನ್ ನಂಬರು 402
ಹಳೇ ಪೋಸ್ಟಾಫೀಸ್ ರಸ್ತೆ, :: ಮೈಸೂರು

ಬಿ ಸೆಕ್ಷನ್
ಳ ಪುಟ
ಸಿ ಸೈ
"ಎ" ಸೆಕ್ಷನ್
ತಪ್ಪದೆ ಓದಿ
ಜಿಡಿಸ್ಪತಿ ಸೈ

163

ಸ್ತ್ರೀ ಲೋಕ

ಲೇ—ಎಂ ಕೆ ಅನಂತರಾಜು, ಮೈಸೂರು.

(ಲೇಖನಂಕ—೨)

ಕಳೆದ ವಾರ ಸ್ತ್ರೀ ಸ್ವಾತಂತ್ರ್ಯವನ್ನು ಕುರಿತು ನಾಲ್ಕು ಮಾತನಾಡಿದ್ದೆನು, ಈ ವಾರ ಸ್ತ್ರೀಯರು ಕಟ್ಟಿದಾರಿಗೆ ಬೀಳಲು ಕಾರಣಗಳನ್ನು ಹೇಳುತ್ತೇನೆ.

ಸ್ತ್ರೀಯರಿಗೆ ಸ್ವಾತಂತ್ರ್ಯವು ಎಷ್ಟು ಆವಶ್ಯಕವೋ ಶೀಲವೂ ಅಷ್ಟೇ ಅವಶ್ಯಕ. ಶೀಲವಿಲ್ಲದ ಯಾವ ಹೆಂಗಸೂ ಸಮಾಜದಲ್ಲಿ ಬಹಿಷ್ಕರಿಸಲ್ಪಡುವಳು.

ಸ್ತ್ರೀಯರು ಅಲ್ಪಮತಿಗಳೆಂಬುದು ತಿಳಿದ ಪ್ರಸಂಗ. ಅವರು ಯಾವ ವಿಷಯವನ್ನೋ ಯೋಚನೆ ಮಾಡುತ್ತಾರೆ. ಆ ವೇಳೆಲೆ ಪಶ್ಚಾತ್ತಾಪಪಡುತ್ತಾರೆ. ಆದರೆ ಕೋಪದಲ್ಲಿ ಕೊಯ್ದುಕೊಂಡ ಮೂಗು ಶಾಂತವಾದ ಮೇಲೆ ಬಂದೀತೋ?

ನನ್ನ ಸ್ನೇಹಿತನೊಬ್ಬನಿದಾನೆ. ಅವನು ಕೇವಲ ದರಿದ್ರಕುಟುಂಬಕ್ಕೆ ಸೇರಿದವನು. ಅವನ ಸಂಸಾರದಲ್ಲಿ ಅತನೂ, ಅತನ ಹೆಂಡತಿ ಮತ್ತು ತಂದೆತಾಯಿಗಳೂ ಇದ್ದರು. ಅವರ ಪೋಷಣೆ ಭಾರವೆಲ್ಲಾ ಅವನದೆ. ಅವನೇನೂ ವಿದ್ಯಾವಂತನಲ್ಲ, ಯಾವದೋ ಸಾಹುಕಾರರ ಅಂಗಡಿಯಲ್ಲಿ ಗುಮಾಸ್ತನಾಗಿದ್ದ. ಬೆಳಿಗ್ಗೆ ಹೋದರೆ ಒರುವುದು ರಾತ್ರೆಯೇ. ಆ ಹೊತ್ತಿಗೆ ಅವನು ತೀರಾ ಬಳಲಿ ಒರುತ್ತಿದ್ದ. ಒಂದೂವರೆ ಏನಾದರೂ ಅಷ್ಟು ತಂದು ಪುಲಗಬಿಡುವನು. ಬೆಳಗಿನಿಂದ ಪೂರಾ ದಣಿದವನಾದುದರಿಂದ ಅವನಿಗೆ ಅತಿ ಜಾಗ್ರತೆ ನಿದ್ರೆಯು ಒಂದುಬಿಡುತ್ತಿತ್ತು. ಅವನಿಗೆ ಪ್ರಾಂಜಲತ್ವ ಪಿಪಾಸೆಗಳು ಅಷ್ಟಿರಲಿಲ್ಲ. ಅವನ ಹೆಂಡತಿಗೆ ಹತ್ತೊಂಬತ್ತು ವರ್ಷವೂ ಕಳೆದಿರಲಿಲ್ಲ. ಇನ್ನೂ ತರುಣಾವಸ್ಥೆ. ಅವಳಲ್ಲಿ ಪ್ರೇಮಕಾವುಗಳು ತುಂಬಿದ್ದವು. ಯೌವನದಿಂದ ಮೂರ್ತೀಭವಿಸಿದ್ದ ಆ ತರುಣಿಗೆ ಜೀವಕಾಗಿದ್ದುದು ಸಲ್ಲದ ಪ್ರೇಮ, ಸರಸಸಲ್ಲಾಪಗಳು.

ಆದರೆ, ಅತನು ಬೆಳಗಿನ ಅಯಾಸದಿಂದ ನಿದ್ರಾಧೀನನಾಗಿದ್ದಾನೆ ಈ ವಿಷಮಪರಿಸ್ಥಿತಿಯಲ್ಲಿ ಆ ತರುಣಿ ಏನು ಮಾಡಬೇಕು? ಸರಸಸಲ್ಲಾಪಗಳನ್ನು ಯಾರೊಂಟಿಗೆ ಮಾಡಬೇಕು? ಅಕೆಯಲ್ಲಿಯೂ ಸೌಂದರ್ಯವಿದೆ, ಸ್ತ್ರೀಯರಿಗೆ ಸಹಜವಾಗಿರುವ ವಾಂಛೆಗಳೆಲ್ಲವೂ ಇವೆ. ಆದರೆ ಅವಳ ಗಂಡನು ಆ ವಿಷಯದಲ್ಲಿ ಅಜೀಯನಾಗಿದ್ದ. ತನ್ನ ಹೆಂಡತಿಯ ಅಂತರಂಗದ ವಾಂಛೆಯನ್ನು ತೀರಿಸಲು ಜನನು ಜೀವ್ಯು ಬಿಟ್ಟ. ಆ ಸುದಿಗ್ಧ ಸಮಯದಲ್ಲಿ ಆ ಹುತ್ತಿಗೆ ಬಂದು ಹೊಸ ಯೋಚನೆ ಉಂಟಾಯಿತು.

ದುಂಬಿಗೆ ಬಂಸು ಮುಂದಲ್ಲಿ ಹೂವಿಲ್ಲದಿದ್ದರೆ ಮತ್ತೊಂದು ಸುರಸಿದಯಲ್ಲಾ ಅನ್ನೋದೆ ಅವಳ ಕಡೆಯ ಸಿದ್ಧಾಂತ.

ತನ್ನ ಪತಿಯಿಂದ ಪಡಜೇಕಾದ ಸುಖವನ್ನು ಇನ್ನೊಬ್ಬನಿಂದ ಪಡಿ ಎಂದು ಅವಳ ಮನಸ್ಸು ಹೇಳಿತು. ಅದರೆ ಅವಳ ಚಿತ್ತ ಅದು ನಿಜ ಯೋಚನೆಯಲ್ಲವೇ, ಎಂದು ಎಚ್ಚರಿಸಿತು. ಆಗ್ಗೆ ಅವಳ ಯೋಚನೆ ಪಾಪಕರವೆಂದು ತಿಳಿದರೂ, ಕಾಮನಿಕಾರನನ್ನು ತಾಳಲಾರದೆ ಹುಚ್ಚಳಂತಾದಳು. ಆ ಸಮಯಕ್ಕೆ ಅವಳಿಗೆ ಒಬ್ಬಳು ನೂತನ ಸ್ನೇಹಿತೆ ಗಂಟು ಬಿದ್ದಳು. ಅವಳೂ ಸ್ವಲ್ಪ ಅಸೀತಳೇ, ಅವಳ ದುರ್ಬೋಧನೆಗೆ ಆ ತರುಣಿ ಬಂಧಿತಳಾದಳು. ಆ ಹುಡುಗಿಗೆ ಆ ಹೊಸಬಳೇ ಒಬ್ಬನನ್ನು ಪರಿಚಯಮಾಡಿಕೊಟ್ಟಳು. ಅದು ಹೊಲಸು ಕೆಲಸವಾದರೂ, ಅವಳ ಮನಸ್ಸಿಗೆ ಸ್ವಲ್ಪ ಆನಂದವೇ ಆಯಿತು, ಆ ಪರಪುರುಷನ ಸಮಾಗಮದಿಂದ. ಆ ಸ್ನೇಹಿತನಿಗೆ ಇದು ಹೇಗೆ ಗೊತ್ತಾಗಬೇಕು? [ಸಶೇಷ

ಜನನೀಜನಕರು ಭಗವಂತನ ಸಮಾನರು

(ಹರನಾಥಬಾಬಾರವರ ಉಪದೇಶಾಮೃತದಿಂದ ಅನುವಾದ)

ತಾಯಿಯನ್ನು ರಕ್ತಮಾಂಸಯುತನಾದ ಶ್ರೀ ಕೃಷ್ಣನೆಂದು ಗೌರವಿಸುವದು ಪ್ರತಿ ವ್ಯಕ್ತಿಯ ಧರ್ಮವು. ನವಮಾಸಗಳು ಹೊತ್ತು, ಹೆತ್ತು ಬೆಳಿಸಿ ದೊಡ್ಡವನನಾಗಿ ಮಾಡಿ ರಕ್ಷಿಸಿದ ತಾಯಿಯನ್ನು ಆ ಜಗೆಯಲ್ಲಿ ಗೌರವಿಸದಿದ್ದಲ್ಲಿ ಮತ್ತೆ ಯಾರನ್ನು ಗೌರವಿಸುವುದು? ಬೇರೆ ಎಲ್ಲಿ ಭಗವಂತನ ದಿವ್ಯಗುಣಗಳು ವ್ಯಕ್ತವಾಗುವುವು. ಭಗವಂತನೂ ಕೂಡ ಜಗತ್ತನ್ನು ಹೊತ್ತು ಹೆತ್ತು ಪೋಷಿಸಿ ರಕ್ಷಿಸುತ್ತಿರುವನು. ಈ ಶರೀರದ ವಿಷಯದಲ್ಲಿ ತಾಯಿಯೂ ಈ ರೀತಿಯಾಗಿ ಮಾಡುವಳು. ಇಂತಹ ಸಮಯದಲ್ಲಿ ತಾಯಿಯನ್ನು ನಾನು ಆ ಸಂಬಂಧದಲ್ಲಿ ಏಕೆ ಕಾಣಕೂಡದು?

ಭಗವಂತನನ್ನು ನನಗಿಷ್ಟವಾದ ಯಾವದೊಂದು ರೂಪದಲ್ಲಿ ಸೇವಿಸುತ್ತಾ ಪೂಜಿಸುವನು. ಹಾಗೆಯೇ ಇತರರೂ ಕೂಡ ಅವರಿಗಿಷ್ಟವಾದ ಪ್ರತಿಯೊಂದು ರೂಪಗಳಿಂದ ಭಗವಂತನನ್ನು ಸೇವಿಸುತ್ತಾ ಪೂಜಿಸುತ್ತಿರುವರು. ಅಂತಹವರನ್ನು ತೃಣೀಕರಿಸಿ ಅವರ ಪೂಜಾ ವಿಧಾನಗಳನ್ನು ಅಗೌರವ ಪಡಿಸಿದಲ್ಲಿ ನಾವು ಪಾಪಕೃತ್ಯ ಮಾಡಿದಂತಲ್ಲವೇ? ಅದೇ ವಿಧವಾಗಿ ನನ್ನ ದಿವ್ಯಳಾದ ಮಾತೆಯನ್ನು ದೇವರೆಂದು ಪೂಜಿಸುತ್ತಾ ಇತರ ಮಾತೆಯರನ್ನು ಅಗೌರವಪಡಿಸುವವರಿಂದ ಅಗಮ್ಯವಾದ ಪಾಪಗಳಿಗೆ ಬೀಜವನ್ನು ಹಾಕುತ್ತಿದ್ದೇನು. ಆದುದರಿಂದ ಇತರ ಮಾತೆಯರ ಹಿತವನ್ನು ಕನ್ನ ಹೆತ್ತತಾಯಿಯ ಹಿತವೆಂದು ಭಾವಿಸಿ ಪೂಜಿಸತಕ್ಕದ್ದು. ಹೆಣ್ಣು ನಾಯಿಗಳನ್ನೂ, ಹೆಣ್ಣು ಜಿಕ್ಕ್ಕಗಳನ್ನೂ ಕೂಡ ನಿರಸನ ಭಾವದೊಂದಿಗೆ ಕಾಣಕೂಡದು. ಹೃದಯದ ರಕ್ತವನ್ನೆ ಧಾರೆ ಎರೆದು ಅತಿ ಜಾಗ್ರತೆಯಿಂದ ಪ್ರಾಣಗಳನ್ನು ಕಾಪಾಡಿದ ಮಾತೆಯನ್ನು ಭಕ್ತಿಪೂರ್ವದಿಂದ ಕಾಣುವದು ಮಾನವನ ಧರ್ಮವು. ತನ್ನನ್ನು ಹೆತ್ತ ತಾಯಿಯನ್ನು ಮೀರಿಸಿದ ದೈವವು ಮತ್ತೊಂದಿಲ್ಲ. ದೈವಲಕ್ಷಣಗಳುಳ್ಳ ಇಂದ್ರಚಂದ್ರಾದಿ ದೇವತೆಗಳೆಲ್ಲರೂ ಮಾತೃ ಶರೀರದೊಳಗೇ ಇರುವರು

ಮಾತಾಪಿತೃಗಳನ್ನು ಅವತಾರ ಪುರುಷರೆಂದು ಪೂಜಿಸಿದಲ್ಲಿ ಕರುಣಾಸಮುದ್ರನಾದ ಶ್ರೀ ಭಗವಾನನ ದಯೆಗೆ ಪಾತ್ರರಾಗುವದು ನಿಶ್ಚಯವು ಮಾತಾಪಿತೃಗಳನ್ನು ಅತಿ ಜಾಗ್ರತೆಯಿಂದ ಕಾಣುವ ವ್ಯಕ್ತಿಯು ಭಗವಂತನನ್ನು ಹೇಗೆ ಮಾತಾಪಿತೃಗಳೆಂದು ಪೂಜಿಸಬಲ್ಲನು? "ಮನೆಯನ್ನು ಗೆದ್ದು ಊರು ಗೆಲ್ಲಬೇಕು" ಎಂಬ ಲೋಕೋಕ್ತಿಯನ್ನು ನೀವು ಅರಿಯಂರಾ? ಅದೇ ರೀತಿಯಾಗಿ ಎಲ್ಲಾ ವಿಷಯಗಳಲ್ಲಿಯೂ ನೀವು ಜಾಗ್ರತೆ ವಹಿಸದೆ ಇದ್ದ ಪಕ್ಷದಲ್ಲಿ ಶ್ರದ್ಧೆಯಿಲ್ಲದ ವಿದ್ಯಾರ್ಥಿಯಂತೆ ಎಲ್ಲಾ ಕಾಲಗಳಲ್ಲಿಯೂ ತಪ್ಪು ದಾರಿಯನ್ನೆ ಹಿಡಿಯುವಿರಿ. ಆದುದರಿಂದ ನಿಮ್ಮ ಮೊದಲನೆಯ ಪಾಠವನ್ನು ಅತಿ ಜಾಗ್ರತೆಯಿಂದ ತಿಳಿಸುಕೊಳ್ಳಲು ಯತ್ನಿಸಿರಿ. ಮಾತಾಪಿತೃಗಳನ್ನು ಸೇವಿಸುವದು ಪ್ರಥಮ ಪಾಠವು. ಈ ಪಾಠವನ್ನು ಕಲಿಯಲು ಅಲಕ್ಷ್ಯ ಮಾಡಿದಲ್ಲಿ ನುಂದೆಯೂ ಹಾಗೆಯೇ ನೀನು ಅಜಾಗ್ರತೆಯಿಂದಿರುವನಾಗುವ. ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದು ಒಹಳ ಕಷ್ಟಸಾಧ್ಯವಾವ ವಿಷಯವು. ಮಾತಾಪಿತೃಗಳನ್ನು ಅವತಾರ ಪುರುಷರಂತೆ ಪೂಜಿಸಿ ಗೌರವಿಸತಕ್ಕದ್ದು. ಭೌತಿಕ ನೇತ್ರಗಳಿಂದ ರಕ್ತಮಾಂಸಗಳಿಂದಿಗೆ ಕೂಡಿದ ದೇವರುಗಳನ್ನು ದರ್ಶಿಸಬೇಕೆಂಬ ವ್ಯಕ್ತಿಯು ಮಾತಾಪಿತೃಗಳನ್ನು ನೋಡಿಕೊಳ್ಳ ಬಹುದು. ಪ್ರವೇಶ ಪರೀಕ್ಷೆಯಲ್ಲಿ ಕೃತಾರ್ಥರಾಗದೆ, ಬಿ.ಎ. ಪ್ಯಾಸ್ ಮಾಡಲು ಇಚ್ಛಿಸುವನೆನು ಯಾರೂ ಇರುವುದಿಲ್ಲ. ಆದುದರಿಂದ ಮಾತಾಪಿತೃಗಳ ಸೇವೆಯೆಂಬ ಪ್ರಥಮ ಪರೀಕ್ಷೆಯಲ್ಲಿ ಉತ್ತೀರ್ಣರಾಗದೆ ಕಾಲೇಜಿಗೆ ಹೋಗೋಣವೆಂಬ ಕೋರಿಕೆಯು ಉನ್ಮತ್ತನ ಭ್ರಮೆಯಂತಿರುತ್ತದೆ.

ನನ್ನ ದೃಷ್ಟಿಯು ಯಾವ ಪದಾರ್ಥದ ಮೇಲೆ ಬಿದ್ದರೂ ಅದರಲ್ಲಿ ನನ್ನ ಪುತ್ರರಿಗಾಗುವ ಮಾತೃ ಪ್ರೇಮವು ನನಗೆ ಗೋಚರವಾಗುತ್ತಿದೆ. ಅಂತಹದು ಇಲ್ಲದಿದ್ದಲ್ಲಿ ಈ ಪ್ರಪಂಚವು ಒಂದು ಕ್ಷಣವಾದರೂ ಇಲ್ಲದೆ ಇರುತ್ತಿತ್ತೆಂಬುದನ್ನು ಭಾವಿಸುವೆನು. ನೀರಿಲ್ಲದೆ ಗಿಡವು ಜೀವಿಸಲಾರದಂತೆ ಮಾತಾಪಿತೃಗಳಿಲ್ಲದೆ ಪ್ರಪಂಚವು ಇರಲಾರದು.

ತಾಯಿಯಿಂದ ಆಶೀರ್ವಾದ ಹೊಂದಿದ ವ್ಯಕ್ತಿಗೆ ಕಷ್ಟವು ಎಂತಹುದೋ ತಿಳಿದಿರುವುದಿಲ್ಲ. ತಾಯಿಯು ಸಂತೋಷಪಟ್ಟು ತನ್ನ ಮಗುವಿಗೆ ಆಶೀರ್ವಾದ ಮಾಡಿದಲ್ಲಿ ಆ ಮಗುವಿಗೆ ಈ ಪ್ರಪಂಚದಲ್ಲಿ ಯಾವ ಲೋಪವೂ ಇರುವುದಿಲ್ಲ ತನ್ನ ಜೀವಿತವನ್ನು ಸದಾ ಶಾಂತಿ ಸಂತೋಷಗಳಲ್ಲಿ ಕಳೆಯುತ್ತಾ ಕೊನೆಗೆ ಶ್ರೀ ಕೃಷ್ಣನ ಪಾದಾರವಿಂದಗಳಲ್ಲಿ ಸೇರುವನು. ತಾಯಿಯನ್ನು ದಿಕ್ಕರಿಸಿದವ ಎಂತಹ ಭಾಗ್ಯವಂತನಾದರೂ ಸ್ವಲ್ಪ ಕಾಲದೊಳಗೆ ತನ್ನ ಸರ್ವ ಭಾಗ್ಯವೂ ತನ್ನ ಗೃಹದಿಂದ ತೊಲಗಿಹೋಗುವುದನ್ನು ಕಾಣುವನು. ಅತನು ಎಂತಹ ಜ್ಞಾನಿಯಾದ ಸನ್ಯಾಸಿಯಾದರೂ ಕೊನೆಗೆ ನರಕವೇ ಸ್ಥಳವೆಂದು ಗ್ರಹಿಸುವನು. [ಸಶೇಷ

ವಿಚಿತ್ರ ಸಮಾಚಾರ

ವೈಜ್ಞಾನಿಕರು ಏನು ಹೇಳುವರೆಂದರೆ ಇಡೀ ವಿಶ್ವದಲ್ಲಿಯ ಪಕ್ಷಿಗಳನ್ನೆಲ್ಲವನ್ನೂ ಸಾಯಿಸಿದ ಪಕ್ಷದಲ್ಲಿ ಮನುಷ ಜಾತಿಯು ಆಸ್ತಿತ್ವವು ಏಳು ವರ್ಷಗಳಿಗಿಂತ ಹೆಚ್ಚಾಗಿ ಇರಲಾರದೆಂದು. ಹೀಗೆಹೇಳಲು ಕಾರಣವೇನೆಂದರೆ ಪಕ್ಷಿಗಳಿಲ್ಲದೆ ಹೋದಲ್ಲಿ ಕೀಟಕಗಳ ಸಂಖ್ಯೆಯು ಮಿತಿಮೀರುವದು. ದನಸಧಾನ್ಯಗಳನ್ನು ಅವು ಹಾಳುಮಾಡಿ ಮನುಷ್ಯರಿಗೆ ತಿನ್ನಲಿಕ್ಕೆ ಏನೂ ಸಿಗದಂತೆ ಮಾಡುವದು. ಮತ್ಸ್ಯಗಳನ್ನು ತಿನ್ನುವಂಥವರು ಮಾತ್ರ ಜೀವಿಸಿರಬಹುದು.

ಂ ಂ ಂ

ಆದುನಿಕ ಯುವಕ ಯುವತಿಯರಿಗೆ ಅವರು ವೃದ್ಧರಾದರೂ ಅಧಿಕ ಸುಂದರರಾಗಿರಬೆಕೆಂಬ ಇಚ್ಛೆ. ಹಾಗೆ ಹಾಗಲು ಅವರು ಯಾವತ್ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಅಷ್ಟೇ ಅಲ್ಲ. ಅದಕ್ಕಾಗಿ ಏನೇನೂ ಉಪಾಯವನ್ನಾದರೂ ಮಾಡುವರು. ಬೆಲ್ಜಿಯಂನಲ್ಲಿ ಒಬ್ಬ ದೈತ್ಯರ ಹುಡುಗಿ ಇದ್ದಳು. ಕೌರಿಸ್ಮರ್‌ಲಾಂಜರೇವಿಚ್ ಎಂಬುದು ಆಕೆಯ ಶಿಷ್ಟ ನಾಮವು ಅಪ್ರತಿಮ ಅನಿಂದ್ಯ ಸೌಂದರ್ಯವುಳ್ಳವಳಾಗಿದ್ದಳು. ಆಕೆಯ ಈ ಅನುಪಮ ಸೌಂದರ್ಯಕ್ಕೆ ಕಾರಣವೇನೆಂಬುದನ್ನು ಅರಿಯಲು ಆಕೆಯಲ್ಲಿಗೆ ಅನೇಕರು ಹೋಗಿಬರಲು ತೊಡಗಿದರು. ಆಕೆಗೆ ಮನೆಯಿಂದ ಹೊರಗೆ ಕಾಲಿಡಲು ಕೂಡ ಅವಕಾಶವಾಗುತ್ತಿತ್ತು. ಅಂತ್ಯದಲ್ಲಿ ಆಕೆಯು ವಿಷವಾಶ್ಚರ್ಯವಾಹಿ ಜೀವನವನ್ನು ಸಾಕು ಮಾಡಿಕೊಳ್ಳಬೇಕಾಯಿತು.

ಂ ಂ ಂ

ಗಡಿಯಾರಗಳನ್ನು ಎಲ್ಲರೂ ನೋಡಿರುವರು. ದೈನಿಕ ಜೀವನದಲ್ಲಿ ಇವು ಅತಿ ಮುಖವಾದ ವಸ್ತುಗಳಲ್ಲೊಂದು. ಯಾವ ದೇಶದಲ್ಲಿ ನಾವು ವಾಸಮಾಡಿಕೊಂಡಿರುವೆವೋ ಅಲ್ಲಿಯ ಸಮಯವನ್ನು ಮಾತ್ರ ಈಗಿನ ಗಡಿಯಾರಗಳು ತೋರಿಸುತ್ತವೆ. ಪ್ರಪಂಚದ ಬೇರೆಬೇರೆ ದೇಶಗಳಲ್ಲಿ, ಯಾವಯಾವ ದೇಶಗಳಲ್ಲಿ ಎಷ್ಟು ಗಂಟೆಯಾಗಿದೆ ಎನ್ನುವ ವಿಷಯವನ್ನು ತಿಳಿಯಲಾಗುವುದಿಲ್ಲ. ಆದರೆ ನ್ಯೂಯಾರ್ಕಿನ ಎಚ್ವರ್ಡ್ ಫೌಲರ್ ಎಂಬ ವೈಜ್ಞಾನಿಕನು ವಿಶ್ವದ ವಿಭಿನ್ನ ದೇಶಗಳ ಕಾಲವನ್ನು ಒಂದೇಸಾರಿ ತಿಳಿಯಬಹುದಾದ ಗಡಿಯಾರವನ್ನು ತಯಾರಿಸಿರುವನು. ಇದು ವಿಶ್ವದ ಪ್ರಧಾನ ನಗರಗಳ ಸಮಯವನ್ನು ಗಂಟೆ ನಿಮಿಷ, ಮತ್ತು ಸೆಕೆಂಡುಗಳೊಂದಿಗೆ ತೋರಿಸುತ್ತಿದೆ.

ಂ ಂ ಂ

ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಲ್ಲಿ ರೇಡಿಯೋಸಗ ಪ್ರಧಾನ ಸ್ಥಾನವುಂಟು. ಈ ಜೆಗೆ ಮೂರು ಅಂಗುಲ ಉದ್ದವಾದ ಗಡಿಯಾರದ ಜೇಪನಲ್ಲಿಡಬಹುದಾದ ರೇಡಿಯೋ ಯಂತ್ರವನ್ನು ವೈಜಾನಿಕರು ತಯಾರಿಸಿರುವರು. ಇದರಿಂದ ವರ್ತಮಾನಗಳನ್ನು ಕೇಳಬಹುದು ಮಾತ್ರವಲ್ಲದೆ ಎಲ್ಲಿಂದ ಬೇಕಾದರೆ ಅಲ್ಲಿಂದ

ಕಕ್ಕಸ ಪ್ರಾರಂಭೋತ್ಸವ

——

ಮಹರ್ಷಿ ಬಾಲಸು ಸಾಂಬಮೂರ್ತಿಯವರು ಒಂದು ಕೆಕ್ಕಸ್ಸಿನ ಪ್ರಾರಂಭೋತ್ಸವವನ್ನು ನಡೆಸಿದಂತೆಯೂ, ಆ ಕಕ್ಕಸ್ಸು ಕೆಲವು ನೂರು ರೂಪಾಯಿಗಳ ಖರ್ಚಿನಿಂದ ನಿರ್ಮಾಣ ಮಾಡಲ್ಪಟ್ಟಿತೆಂದೂ ತಿಳಿಯಬಂದಿದೆ. ಈ ಬಗೆಯ ಪ್ರಾರಂಭೋತ್ಸವಗಳೂ, ಪೂರ್ತ್ಯೋತ್ಸವಗಳೂ, ಆಂತ್ಯೋತ್ಸವಗಳೂ ಏಕೆ ಎಂಬುದು ನನ್ನ ಪ್ರಶ್ನೆ. ಬರಡುಗೆಸ್ಸೂ, ಆಡಂಬರ ವೇಷಭಾಷೆಗಳನ್ನೂ ತೆಗೆದುಹಾಕಬೇಕೆಂಬ ಇಚ್ಛೆಯುಳ್ಳ ಈ ಕಾಂಗ್ರೆಸ್ ನಾಯಕರಿಗೆ ಪ್ರಾರಂಭೋತ್ಸವವೇ ಸರಿಯಾದುದಲ್ಲ. ಆದರಲ್ಲಿಯೂ ಕಕ್ಕಸ್ ಪ್ರಾರಂಭೋತ್ಸವವೇ? ಒಂದು ಕಟ್ಟಡಕ್ಕೆ ಪ್ರಾರಂಭೋತ್ಸವವಾಗುವ ಸಮಯದಲ್ಲಿ ಶಂಖುಸ್ಥಾಪನೆ ಮಾಡಲು ಗಾರೆಯನ್ನು ಬೆಳ್ಳಿಯ ಕರಣಿಯಿಂದ ತೆಗೆದು ಹಾಕುವರು. ಹಾಗೆಯೇ ಈ ಮಹರ್ಷಿಗಳು ಪ್ರಾರಂಭೋತ್ಸವದಲ್ಲಿ ಏನು ಮಾಡಲೆಳಸಿದರೋ ತಿಳಿಯದು. ಕಕ್ಕಸ್ಸಿಗೆ ಪ್ರಾರಂಭೋತ್ಸವವೆಂದರೇನು? ಇದೇನು ವಿಶ್ವವಿದ್ಯಾನಿಲಯವೇ, ಸಭಾಸದನವೇ, ದರ್ಬಾರ್‌ಕ್ಷತ್ರವೇ. ಅಥವಾ ಪವಿತ್ರವಾದ ದೇವಾಲಯವೇ? ಶಿವಶಿವಾ! ಕೊನೆಗೆ ಮಹರ್ಷಿಗಳು ಇಂತಹ ಕೆಲಸಗಳಲ್ಲಿ ಭಾಗವಹಿಸುವಿಕೆಯು ಅವರಿಗೆ ಅದೊಂದು ಪ್ರವಾಹವೆಯಾಗಿ, ಫ್ಯಾಷನ್ನಾಗಿ, ಒಂದು ಘನ ಕಾರ್ಯವಾಗಿ ಇರುವದೋ ಏನೋ! ಅಗಲಿ, ಅದು ಭಾವಿ ಯುಗದ ಲೋಕದಲ್ಲಿ ಅನರ್ಘ್ಯವಾಗಿ ಗಣಿಸಲ್ಪಡುವದು. ಇಂದಿನ ಕಲಿಯುಗ ಮಹರ್ಷಿಗಳಿಗೆ ಇದು ಒಂದು ತಪ್ಪು ಕೆಲಸವಲ್ಲವೇನೋ! "ದಿವ್ಯವಾಣಿ"

ಅನುವಾದ

ಸಮಾಚಾರಗಳನ್ನು ಕಳುಹಿಸಬಹುದು. ಅನೇಕ ರಿಕಾದಂತಹ ದೇಶಗಳಲ್ಲಿ ದೊಡ್ಡಮನುಷರ ವೇಷವನ್ನು ಧರಿಸಿ ಮೋಟಾರುಗಳಲ್ಲಿ ಕುಳಿತು ಬೇಕಾದ ಸ್ಥಳಗಳಿಗೆ ಹೋಗಿ ಪುಂಡಾಟ ಲೂಟಿ ಮಾಡುವಷ್ಟೆ. ಅಂಥಾ ದೇಶಗಳಲ್ಲಿ ಈ ಯಂತ್ರವು ಒಳ್ಳೆ ಸಹಕಾರಿಯಾಗಿರುತ್ತದೆ. ಈ ಯಂತ್ರದ ಮೂಲಕ 4 ವೈಲು ದೂರದವರೆಗೂ ಸಮಾಚಾರಗಳನ್ನು ಕಳುಹಿಸಬಹುದು. ಪೋಲೀಸಿನವರಿಗೆ ಅಂಥಾ ಕಷ್ಟ ಸಮಯಗಳಲ್ಲಿ ಸಮಾಚಾರವನ್ನು ಕಳುಹಿಸಲು ಈ ಪಾಕೆಟ್ ರೇಡಿಯೋ ಒಳ್ಳೆ ಸಹಾಯ ವಾರ್ತೆದೆ.

ಂ ಂ ಂ

ಜರ್ಮನ್ ವೈಜ್ಞಾನಿಕ ಡಾ|| ವಜೆಚಯಿಸ್ ರವರು ವೈಜ್ಞಾನಿಕ ಶಾಸ್ತ್ರ ಶೋಧನೆಯ ಕಾರ್ಯದಲ್ಲಿ ಹೆಸರು ಹೊಂದಿದವರು. ಹಾಗೂ ಆ ಶಾಸ್ತ್ರದಲ್ಲಿ ನೋಬಲ್ ಪುರಸ್ಕಾರವನ್ನು ಪಡೆದವರು. ಅವರು ತಮ್ಮ ಸಂಶೋಧನೆಗಳ ಫಲವಾಗಿ ಏನು ತಿಳಿಸಿರುವರೆಂದರೆ— ವಿಶ್ವದ

ವಿವಿಧ ವಿಷಯಗಳು

ಕಾಶಿಯ ಒಂದಾನೊಂದು ಜೈಲಿನಲ್ಲಿ ಖೈದಿಗಳಿಗೆ ಕೊಡಲಾಗುತ್ತಿರುವ ಆಹಾರದ ವಿಷಯವಾಗಿ ದೂಷಿಸಿ ಲೀಡರ್ ಪತ್ರಿಕೆಗೆ ಬರೆದುದಕ್ಕಾಗಿ, ಕಾಶೀ ಪ್ಲೀಡರ್ ಮಿ|| ಬೇಚನ್ ರಾಂಗುಪ್ತರವರಿಗೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ನ ಕೆರೆ 1250 ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

ಂ ಂ ಂ

ಸುಭಾಸ್ ಚಂದ್ರ ಬೋಸರು ಬರ್ಲಿನ್ನಿನಲ್ಲಿ ಖೈದಿಯಾಗಿರುವರೆಂದು ಒಮ್ಮೆ ವರ್ತಮಾನ ಹರಡಿದೆ

ಂ ಂ ಂ

ಯುದ್ಧದ ಗಲಾಟೆಯಿಂದ ಬ್ರಿಟನ್ನಿನಲ್ಲಿ ನಶ್ಯಾ ಹಾಕುವುದು ಹೆಚ್ಚಾಗಿದೆ. ಆಗಾಗ್ಗೆ ನಶ್ಯಾ ಹಾಕಿಕೊಳ್ಳುವುದರಿಂದ ನಂಗಳ ಸ್ವಸ್ಥರಿಗೆ ಸಹಾಯವಂತೆ!

ಂ ಂ ಂ

ಮಿ|| ಜಿನ್ನಾರವರು ಪತಿಯು ಬ್ರಾಹ್ಮಣರೆಂದೂ, ಪಂಜಾಬಿನ ಮುಖ್ಯಮಂತ್ರಿ ಸರ್ ಸಿಕಂದರರು ರಾಜಪುತ್ರರೆಂದೂ, ಮಿ|| ಎಸ್. ಎಂ. ಅಹಮದ್‌ರವರು ಪಯಿ ನಿಯರ್ ಪತ್ರಿಕೆಗೆ ಬರೆದಿದ್ದಾನೆ. ಒಳ್ಳೇ ಕಲಸನೇ ಆಯ್ತು!

ಂ ಂ ಂ

ರೇಪಲ್ಲಿ ಪ್ರಾಂತ್ಯದಲ್ಲಿಯ ಪೆಪಪುಲಸದ್ರಗ್ರಾಮದಲ್ಲಿ ಯಲವರ್ತಿ ವೆಂಕಸ್ಯಯ್ಯ ಜ್ಞಾಧುರಿಯವರ ಹಿತ್ತಲಲ್ಲಿ ಒಂದು ಸೋರೇ ಒಳ್ಳೆ ಇದೆ. ಮಾಮೂಲಾಗಿ ಈ ಗಿಡದಲ್ಲಿ ಒಂದೊಂದು ಕವಲಿಗೆ ಒಂದೊಂದು ಕಾಯಿಯಂತೆ ಬಿಡುವುದು. ಆದರೆ ಈ ಗಿಡದಲ್ಲಿ ಒಂದು ಕವಲಿಗೆ 5(ಕಾಯಿಗಳು ಈಗ ಬಿಟ್ಟಿವೆ, ಅವು ರುಚಿಯಲ್ಲಿಯೂ ಹೆಚ್ಚಾಗಿವೆ. ಅವುಗಳ ಪ್ರಮಾಣವು ಸಾಧಾರಣ ಸೋರೇಕಾಯಿಗಳ ಪ್ರಮಾಣದಷ್ಟಿವೆ.

ಂ ಂ ಂ

ಅನಂತಪುರದ ನೀರಗಂಟಿ ಬೀದಿಯಲ್ಲಿ ಒಬ್ಬ ವ್ಯಾಪಾರಿಯ ಮನೆಯ ಸಮೀಪದಲ್ಲಿ ಒಂದು ಬೇಲದ ಮರದಿಂದ ಬಿಳುಪಾಕಾರವಾದ ಹುಡಿಯು ಕೆಳಗೆ ಜಳಲಾರಂಭಿಸಿದೆ. ರುಚಿ ನೋಡಲು ಸಕ್ಕರೆಯಂತೆ ಸಿಹಿಯಾಗಿರುವದು. ಇದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ.

ಲ್ಲಿ ಸೌದೆಯಿಂದ ತಯಾರಾಗದ ಯಾವ ಪದಾರ್ಥವೂ ಇಲ್ಲ. ಸೌದೆಯಿಂದ ಕಲ್ಲಸ್ಕರೆ ಮತ್ತು ಹಿಟ್ಟುಗಳು ತಯಾರಿಸಲ್ಪಡುವವು. ಯುದ್ಧಕ್ಕೆ ಉಪಯೋಗವಾಗುವ ವಿಸ್ಫೋಟಕ ಪದಾರ್ಥಗಳು ಕೂಡ ಇದರಿಂದ ತಯಾರಾಗಲ್ಲವೆ. ಧರಿಸಲು ಸುಂದರವಾದ ರೇಷ್ಮೆಯಂಥಾ ಬಟ್ಟೆಗಳನ್ನು ಕೂಡ ಸೌದೆಯಿಂದ ತಯಾರಿಸಬಹುದು. ಪ್ರಪಂಚಕ್ಕೆ ಕಾಮಧೇನು ಮತ್ತು ಕಲ್ಪವೃಕ್ಷ ಸದೃಶವಾದುದು ಸೌದೆಯು ಮಾತ್ರವೇ ಆಗಿದೆ. (ಜ್ಞಾನಶಕ್ತಿ)

165

Sri Parashuram Hall

ನಮ್ಮಲ್ಲಿ ಎಲ್ಲಾ ತರಹ ಕೋಟಿಂಗ್ಸ್, ಪರಟಿಂಗ್ಸ್ ಟವಲ್ಸ್. ಅಂಪ್ರಲಾನ್ ಮತ್ತು ಎಲ್ಲಾ ಸೈಜು ಕಂಪ್ಲಂ ಹಾಸಿಗೆ ದಿಂಬುಗಳು ಸುಲಭ ಬೆಲೆಗೆ ದೊರೆಯುತ್ತವೆ. ವತ್ತು ಒಟ್ಟಿಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಅಂದವಾಗಿಯೂ ಮನಸ್ಸು ಒಪ್ಪುವಂತೆಯೂ ಹೊಲೆದು ಕೊಡುತ್ತೇವೆ

ವಿಳಾಸ:— **ಶ್ರೀ ಪರಶುರಾಂ ಹಾಲ್**
ಸಯ್ಯಾಜಿರಾವ್ ರೋಡ್, :: ಮೈಸೂರು,
ಫೋ—ಧೋಂಡೋಜಿರಾವ್ ಅಂಡ್ ಸನ್ಸ್

Sri
Mahalakshmi Hall
Tailors
Cutlitters
Breeches Specialists
Sayyaji Rao Road, Mysore

ನಿಮ್ಮ ಫೌಂಟೆಪೆನ್ನುಗಳ
ಆಯಸ್ಸು ಪೂರೈಸಿತೆ!

ನಮ್ಮಲ್ಲಿಗೆ ಒಂದರೆ ಪುನರ್ಜೀವನ ಕೊಡಲ್ಪಡುತ್ತೆ. ಎಲ್ಲಾ ಫೌಂಟೆನ್ ಪೆನ್ನ ನಿಬ್ಬುಗಳಿಗೂ ಅವುಗಳ ಸ್ಪೇರ್‌ಪಾರ್ಟ್ಸ್‌ಗಳಿಗೆ ನಮ್ಮಲ್ಲಿಗೆ ಬನ್ನಿ.

ಮೊಕ್ತಾರ್ ಅಂಡ್ ಕೋ.
ಲ್ಯಾನ್ಸ್‌ಡೌನ್ ಬಜಾರ್. ಮೈಸೂರು.

ಅಕ್ಕರ
ಸಾಮಾಜಿಕ
— ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆಪೂರ್ತಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. 7 ಆಣೆ ಸ್ಟಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸಲಾಗುತ್ತೆವೆ. ಸತ್ಯವಾದಿ ಆಫೀಸು. ಮೈಸೂರು

ಹಿಂದುಸ್ಥಾನದ



ಶುದ್ಧ ಗಂಧದ ಸಾಬೂನು
ಮೈಸೂರ್ ಸ್ಯಾಂಡಲ್‌ಸೋಪ್

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

ಸತ್ಯವಾದಿ ವಾರಪತ್ರಿಕೆಗೆ
— ಚಂದಾದಾರರಾಗಿರಿ —

ವಾರ್ಷಿಕಚಂದಾ "ಎ. ಬಿ." ಸೆಕ್ಷನ್ ಅಂಚೆ ವೆಚ್ಚಸೇರಿರೂ 1-12-0. 3 ತಿಂಗಳಿಗೆ 8 ಆಣೆ
ವಿ. ಪಿ. ಪದ್ಧತಿ ಇಲ್ಲ

—— ಆರ್ಡರ್ ಫಾರಂ ——

ಸ್ವಾಮಿ,
ತಮ್ಮ ವಾರಪತ್ರಿಕೆಗೆ ನನ್ನನ್ನು ವಾರ್ಷಿಕ ಚಂದಾದಾರನನ್ನಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕಾಗಿ ಕೋರುತ್ತೇನೆ. ಅದಕ್ಕಾಗಿ ವಾರ್ಷಿಕ ಚಂದಾವಾವ ರೂ 1-12-0 ಯನ್ನು ಮನಿಯಾರ್ಡರ್ ಆಥವಾ **ಪೋಸ್ಟಲ್‌ಆರ್ಡರ್** ನೂಲಕ ಇವರೊಂದಿಗೆ ಹಣ ರವಾನಿಸಿದ್ದೇನೆ.

For Luscious Menu and
Fine Coffee and Tea
Sastry's Coffee Rooms
Chamarajapuram, Mysore

Advertise in "Satyavadi"

Edited, Printed & published by M S. Krishna Rao, at the Satyavadi Press Chamaraja Agrahar, Mysore.

ಪುರುಷರ ಬಲ ಯೌವನಗಳಿಗಾಗಿಯೂ, ಸ್ತ್ರೀಯರ ಸಂತಾನ ಸೌಂದರ್ಯಗಳಿಗಾಗಿಯೂ ಅನಾದಿಯಿಂದಲೂ ಪ್ರಯತ್ನಿಸುತ್ತಿರುವುದುಂಟು. — — ಈ ಕೋರಿಕೆಗಳು ಸಫಲಿಸಲು ಇಂದೇ ನಮ್ಮ

ಶ್ರೀ ಸುಧಾ

— ಉಪಯೋಗಿಸಿರಿ —